# ಕನ್ನಡ ಕರಾವಳಿಯ ಇತಿಹಾಸಜ್ಞ ಡಾ. ಪಾದೂರು ಗುರುರಾಜ ಭಟ್ಟರು. ಕ್ರಿ.ಶ. (1924-1978)

ಕರ್ನಾಟಕದ ಕರಾವಳಿಯ ಇತಿಹಾಸವೆನ್ನುವಾಗ ಮೊದಲು ನೆನಪಿಗೆ ಬರುವ ಹೆಸರು ಡಾ. ಪಾದೂರು ಗುರುರಾಜ ಭಟ್ಟರದ್ದು. ಗೋಕರ್ಣದಿಂದ ಕಾಸರಗೋಡಿನವರೆಗೆ ಚಾಚಿಕೊಂಡಿರುವ ಪರಶುರಾಮಸೃಷ್ಟಿಯೆಂದು ಸ್ಕಂದ ಪುರಾಣ,ಸಹ್ಯಾದ್ರಿ ಖಂಡಪುರಾಣ, ಕೇರಳೋತ್ಪತ್ತಿ ಮುಂತಾದ ಪೌರಾಣಿಕ ಐತಿಹ್ಯದಲ್ಲಿ ಹೇಳಲ್ಪಡುವ, ಇಂದಿಗೆ ಭಾಗಷಃ ಕನ್ನಡ ಮತ್ತುಳಿದ ಬಹುಭಾಗ ತುಳುಭಾಷೆಯನ್ನಾಡುವ ಈ ಪಶ್ಚಿಮಕರಾವಳಿ ಪ್ರದೇಶದ ಸಾಂಸ್ಕೃತಿಕ-ಸಾಮಾಜಿಕ-ಧಾರ್ಮಿಕ ಇತಿಹಾಸವನ್ನು ಡಾ. ಭಟ್ಟರಷ್ಟು ಆಳವಾಗಿ, ಸಮಗ್ರವಾಗಿ ಸಂಶೋಧಿಸಿ ವಿವರಿಸಿದವರು ಮತ್ತೊಬ್ಬರಿಲ್ಲವೆನ್ನಬಹುದು.ಅವರ 350ಕ್ಕೂ ಮಿಗಿಲಾದ ಬಿಡಿ ಬರಹಗಳು ಲೇಖನರೂಪದಲ್ಲಿ ನಾನಾ ಪತ್ರಿಕೆಗಳಲ್ಲಿ, ನಿಯತಕಾಲಿಕಗಳಲ್ಲಿ ಪ್ರಕಟವಾಗಿದ್ದು, ಗ್ರಂಥಗಳ ರೂಪದಲ್ಲಿ ನಾವು ನೆನೆಪಿಸಿಕೊಳ್ಳಬಹುದಾದದ್ದು "ತುಳುನಾಡು" (1963),"ತುಳುನಾಡಿನ ಇತಿಹಾಸದಲ್ಲಿ ಸ್ಥಾನಿಕರು" (1966)," ಅಂಬಲ್ಪಾಡಿಯ ಇತಿಹಾಸ "(1967),"ಮಂದಾರ್ತಿಯ ಸಮೀಕ್ಷೆ" (1971), "ಇತಿಹಾಸ ಒಂದು ವಿಮರ್ಶೆ" (1971)," ಉಡುಪಿಯ ಇತಿಹಾಸ" (1971), "ದಕ್ಷಿಣ ಕನ್ನಡದ ತುಳುವರು ಹಾಗೂ ತುಳುವ ಸಂಸ್ಕೃತಿ" (1972), "ಬಾರಕೂರು ಮರೆಯಲಾಗದ ತುಳುನಾಡ ರಾಜಧಾನಿ" (1972), "ಆಳುಪರಸರು" (1976), "ತುಳುನಾಡಿನ ಸಪ್ತಕ್ಷೇತ್ರಗಳು" (1976), "ತುಳುನಾಡಿನ ನಾಗಮಂಡಲ" (1977) ಮತ್ತು "ಕದ್ರಿಯ ಇತಿಹಾಸ" (1977) ಮುಂತಾದ ಮಹತ್ವಪೂರ್ಣ ಲೇಖನಗಳು.

ಆಂಗ್ಲ ಭಾಷೆಯಲ್ಲಿ ಅವರು ಪ್ರಕಟಿಸಿದ ಅಮೂಲ್ಯ ಸಂಶೋಧನಾತ್ಮಕ ಬೃಹತ್ ಗ್ರಂಥಗಳೆಂದರೆ, "Antiquities of South Kanara" (1969) ಮತ್ತು "Studies in Tuluva History and Culture" (1975). ಇವುಗಳಲ್ಲಿ ಎರಡನೆಯದ್ದು ಅವರ ಮೇರುಕೃತಿಯೆನ್ನಬಹುದು. ಮೊದಲು ಪ್ರಕಟಿಸಿದ Antiquities of south Kanara ದ ವಿಷಯ ವಸ್ತುವನ್ನೇ ಮತ್ತಷ್ಟು ಆಳವಾಗಿ, ವಿಸ್ತೃತವಾಗಿ ಅಧ್ಯಯನ-ಸಂಶೋಧನೆ ಮಾಡಿ ರಚಿಸಿದ ಬೃಹತ್ ಸಂಪುಟವಿದು. ಕರಾವಳಿಯ ಸಮಾಜವ್ಯವಸ್ಥೆ, ಜಾತಿಗಳು, ಸ್ತರವಿನ್ಯಾಸದ ಸ್ವರೂಪ, ಬ್ರಾಹ್ಮಣ ಜಾತಿಯ ಪ್ರಭೇದಗಳು, ಕುಲನಾಮಗಳು,ವೃತ್ತಿಮೂಲದ ಅನ್ವರ್ಥನಾಮಗಳ ಸಮಗ್ರ ವಿವರಣೆಯ ಜತೆಗೆ, ಬ್ರಾಹ್ಮಣೇತರ ಜಾತಿಗಳು, ಪ್ರತಿಯೊಂದು ಜಾತಿಯ ಹೊರವಿವಾಹ ಪದ್ಧತಿಯಲ್ಲಿ ಪರಿಗಣಿಸಲ್ಪಡುವ, ಬ್ರಾಹ್ಮಣರ ಗೋತ್ರಕ್ಕೆ ಸಮಾನವಾದ ಮಾತೃವಂಶೀಯ ಅನ್ವರ್ಥನಾಮಗಳು ಹೀಗೆ ಈ ಪ್ರದೇಶದ ಸಮಾಜದ ರಚನೆಯ ಒಂದು ಸ್ಪಷ್ಟ ಸ್ವರೂಪವನ್ನು ಪರಿಚಯಿಸುವ, ಸಮಾಜ ಶಾಸ್ತ್ರಜ್ಞರಿಗೆ ಅತ್ಯಂತ ಉಪಯುಕ್ತವಾದ ವಿವರಣೆಯನ್ನು ಈ ಗ್ರಂಥದಲ್ಲಿ ಕಾಣಬಹುದು. ಜತೆಗೆ ಈ ಪ್ರದೇಶದ "ಪಂಚಾಯತನ" ಸ್ವರೂಪದ ದೇವಾಲಯ-ವಿಗ್ರಹ ಶಾಸ್ತ್ರಕ್ಕೆ ಸಂಬಂಧಿಸಿದ, ಶಿವ,ವಿಷ್ಣು,ದುರ್ಗೆ,ಗಣಪತಿ,ಸ್ಕಂದ ಹಾಗೂ ಸೂರ್ಯ ದೇವಾಲಯಗಳು ಮತ್ತು ಅಲ್ಲಿಯ ಮೂಲವಿಗ್ರಹಗಳ ಶೈಲಿಯಲ್ಲಿ ಕಂಡು ಬರುವ ವೈವಿಧ್ಯ, ಅವುಗಳ ಪ್ರಾಚೀನತೆ, ಈ ದೇವಾಲಯಗಳ ಬಗ್ಗೆ ಪುರಾಣದಲ್ಲಿರುವ ಶಾಸನಗಳ ವಿವರ, ಹೀಗೆ ಧಾರ್ಮಿಕ ಇತಿಹಾಸದ ಸಮಗ್ರ ನೋಟವನ್ನು ಈ ಗ್ರಂಥವು ಒಳಗೊಂಡು,

ಕರಾವಳಿಯ ಧಾರ್ಮಿಕ ಇತಿಹಾಸ ಮತ್ತು ವಿಗ್ರಹ ಶಾಸ್ತ್ರವನ್ನು ಗಂಭೀರವಾಗಿ ಅಧ್ಯಯನ ಮಾಡುವ ಸಂಶೋಧಕರಿಗೆ ಅತ್ಯಂತ ಅಮೂಲ್ಯ ಗ್ರಂಥವಾಗಿದೆ. ಇಲ್ಲಿಯ ಜಾತಿಗಳಾದ ಬಂಟರು, ಬಿಲ್ಲವರು,ಮೊಗವೀರರು ಮುಂತಾದವರುಗಳ ಬಗ್ಗೆ ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ಈ ಗ್ರಂಥವು ದಾರಿದೀಪದಂತಿದೆ. ಭಾತಾರಾಧನೆ, ನಾಗಮಂಡಲದಂತಹ ವಿಶಿಷ್ಟ ದೇಶೀಯ ಧರ್ಮಾಚರಣೆಗಳ ಬಗ್ಗೆಯೂ ಈ ಗ್ರಂಥವು ಒಂದು ಉಪಯುಕ್ತ ಆಕರವಾಗಿದೆ. ಶಾಸನಗಳು, ದೇವಾಲಯದಲ್ಲಿರುವ ಮೂಲವಿಗ್ರಹಗಳ ಛಾಯಚಿತ್ರಗಳ ಸಮೇತ ವಿವರಿಸುವ ಭಟ್ಟರ ಶೈಲಿಯು ಅನನ್ಯವಾಗಿದೆ.

ಇವರ ಮೊದಲು ಥರಸ್ಟನ್, ಬರ್ನೆಲ್, ಸ್ಟರ್ರೋಕ್,ಎಮಿನೋ ಮತ್ತು ಬರೋ ಮುಂತಾದ ಕೆಲವು ವಿದ್ವಾಂಸರುಗಳು ಇಲ್ಲಿಯ ಸಮಾಜದ ವಿವಿಧ ಜಾತಿಗಳು, ಭಾಷೆ,ವ್ಯಾಕರಣ,ಭೂತಾರಾಧನೆ ಮುಂತಾದ ವಿಷಯಗಳ ಬಗ್ಗೆ ವಿವರ ನೀಡುವ ಗ್ರಂಥಗಳನ್ನು ೧೯ ನೆಯ ಶತಮಾನದಿಂದ ಆರಂಭಿಸಿ, ಪ್ರಕಟಿಸಿದ್ದನ್ನು ನಾವು ಕಾಣಬಹುದು. ಆ ಬಳಿಕ ಈ ಪ್ರದೇಶದ ಅಧ್ಯಯನ ಮಾಡಿ ಲೇಖನಗಳನ್ನು ಪ್ರಕಟಿಸಿದವರು ದಿವಂಗತ ಮಂಜೇಶ್ವರ ಗೋವಿಂದ ಪೈಯವರು. ಇವರ ಜೊತೆಗೆ ದಿ| ಗಣಪತಿ ರಾವ್ ಐಗಳ್ ಕೂಡಾ ಇಲ್ಲಿಯ ಜಾತಿಗಳನ್ನು ಗುರುತಿಸಿ ಸಂಕ್ಷಿಪ್ತ ವಿವರಣೆಯನ್ನು ನೀಡಿದ್ದಾರೆ. ಸ್ಟರ್ರೋಕ್ ಎನ್ನುವ ಜಿಲ್ಲಾಧಿಕಾರಿಯವರೂ ಬ್ರಿಟೀಷರ ಕಾಲದಲ್ಲಿ ಇಲ್ಲಿದ್ದ ಜಾತಿಯ ಯಾದಿಯನ್ನು ಸಿದ್ದಗೊಳಿಸಿದ್ದರು. ಇವರೆಲ್ಲರಿಗಿಂತ ಅನಂತರದಲ್ಲಿ ತುಳುನಾಡಿನ ಆಳವಾದ ಅಧ್ಯಯನ ಮಾಡಿ ಗ್ರಂಥವನ್ನು ಪ್ರಕಟಿಸಿದವರು ಡಾ. ಭಾಸ್ಕರ ಆನಂದ ಸಾಲೆತೊರೆಯವರು. ಅವರ "History of Tuluva"ವು ಡಾ.ಭಟ್ಟರ ಸಂಶೋಧನೆಯಂತೆಯೇ ಒಂದು ಅತ್ಯಂತ ಅಮೂಲ್ಯವಾದ ಆಕರವಾಗಿದೆ. ಡಾ.ಭಟ್ಟರೂ ಈ ಗ್ರಂಥದ ಅಧ್ಯಯನದ ಜತೆಗೆ ತನ್ನ ವ್ಯಯಕ್ತಿಕ ಸಂಶೋಧನೆಯ ಮೂಲಕ ಈ ಕರಾವಳಿಯ ಸಮಾಜ-ಸಂಸ್ಕೃತಿ ಧರ್ಮದ ಇತಿಹಾಸವನ್ನು ಮತ್ತಷ್ಟು ಶ್ರೀಮಂತ,ಪ್ರಕಾಶಮಾನವಾಗಿಸಿದ್ದಾರೆ. ತಮ್ಮ "Studies in Tuluva History and Culture" ಮೂಲಕ ವಿಗ್ರಹ ಶಾಸ್ತ್ರದ ಅಧ್ಯಯನ ಮಾಡುವವರಿಗಂತೂ ಇದೊಂದು ಬೇರೆಲ್ಲೂ ಸಿಗದ, ಅಪರೂಪದ ವಿಗ್ರಹ ವೈವಿಧ್ಯವನ್ನು ಕಣ್ಣಮುಂದಿಡುವ ದೃಶ್ಯಮಾಧ್ಯಮ. ಗಣಪತಿಯ,ಶಿವನ,ವಿಷ್ಣುವಿನ,ದುರ್ಗೆಯ ವಿವಿಧ ಪ್ರಾಕಾರಗಳು,ದಕ್ಷಿಣಾಮೂರ್ತಿ,ಉಚ್ಚಿಷ್ಟಗಣಪತಿ,ಹೇರಂಭ ಮುಂತಾದ ದೈವತ ಕಲ್ಪನೆಯಲ್ಲಿನ ವೈವಿಧ್ಯ-ಚೋಳ,ಪಲ್ಲವ,ಹೊಯ್ಸಳ,ವಿಜಯನಗರ ಶೈಲಿಗಳಿಗೂ ಇಲ್ಲಿ ಸಾಕಷ್ಟು ಉದಾಹರಣೆಗಳು ಲಭಿಸುತ್ತವೆ. ಒಟ್ಟು ಇದೊಂದು ಕರಾವಳಿಯ ಸಂಸ್ಕೃತಿ ಸಮಾಜದ ಇತಿಹಾಸದ ವಿಶ್ವಕೋಶವೆನ್ನಬಹುದು.

ಪ್ರೊ. ಶ್ರೀಪತಿ ತಂತ್ರಿ
ಪಂಚಾರ್ಷೇಯ, ಮಹಾಕಾಳಿ ಮಾರ್ಗ
ಅಂಬಾಲ್ಪಾಡಿ, ಉಡುಪಿ.